ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯ, ಕೆಜಿಎಫ್

ಸಿ.ಸಿ.ನಂ.520/2023

ಚಾಸಾ: 1 ಪ್ರಾಸಾ:1

ದಿನಾಂಕಃ 06.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು– | ರವಿ |
| ತಂದೆಯ ಹೆಸರು– | ಶಿವಣ್ಣ |
| ವಯಸ್ಸು – | 47 ವರ್ಷ |
| ಉದ್ಯೋಗ– | ಕೂಲಿ |
| ವಾಸ– | ತರೀಕೆರೆ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

1. ನನಗೆ ಆರೋಪಿಯ ಪರಿಚಯವಿರುವುದಿಲ್ಲ. ಮೃತ ಲೋಕೇಶರವರು ನನ್ನ ಅಣ್ಣನಾಗಬೇಕು. ಈಗ ಸುಮಾರು 4 ವರ್ಷಗಳ ಹಿಂದೆ ಒಂದು ರಸ್ತೆ ಅಪಘಾತದಲ್ಲಿ ನಮ್ಮ ಲೋಕೇಶರವರಿಗೆ ಗಂಭೀರ ಸ್ವರೂಪದ ಗಾಯಗಳು ಆಗಿ ಅವರು ಮರಣ ಹೊಂದಿರುತ್ತಾರೆ. ಸದರಿ ಅಪಘಾತದ ವಿಚಾರವಾಗಿ ನಾನು ಪೊಲೀಸರಿಗೆ ದೂರು ಸಲ್ಲಿಸಿದ್ದೆ ಮತ್ತು ಆ ಮೇರೆಗೆ ಪೊಲೀಸರು ಸ್ಥಳ ಮತ್ತು ಅಮಾನತ್ತು ಮಹಜರ ಜರುಗಿಸಿ ಫೋಟೊ ತೆಗೆದಿರುತ್ತಾರೆ.

2. ದೂರನ್ನು ನಿಪಿ.1 ಹಾಗೂ ಮಹಜರಗಳನ್ನು ನಿಪಿ.2 ಮತ್ತು 3 ಹಾಗೂ ಅವುಗಳ ಮೇಲಿರುವ ನನ್ನ ಸಹಿಗಳನ್ನು ನಿಪಿ.1(ಎ) ರಿಂದ 3(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಫೋಟೊಗಳನ್ನು ನಿಪಿ.4 ಮತ್ತು 5 ಎಂದು ಗುರುತಿಸಲಾಯಿತು.

3. ಸದರಿ ಅಪಘಾತವನ್ನು ನಾನು ನೋಡಿರುವುದಿಲ್ಲ ಮತ್ತು ಅದು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಾಗಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ನನ್ನ ಮರು ಹೇಳಿಕೆ ಪಡೆದಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃಮಾನ್ಯ ಎಪಿಪಿ ರವರಿಂದಃ**

4. ನಾನು ದಿನಾಂಕ 27.10.2022 ರಂದು ಪೋಲೀಸರ ಮುಂದೆ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ತನ್ನ ವಾಹನವನ್ನು ಅತೀ ವೇಗೆ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ನಮ್ಮ ಅಣ್ಣನಿಗೆ ಅಪಘಾತಪಡಿಸಿರುತ್ತಾನೆ ಈಗ ನನಗೆ ಓದಿ

ಹೇಳಿದ ಹಾಗೆ ಮರು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯನ್ನು ಈಗ ನಿಪಿ-6 ಎಂದು ಗುರುತಿಸಲಾಯಿತು. ನಿಪಿ-6 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿ ಹೆಚ್ ಪಿ ವಕೀಲರುಗಳಿಂದಃ**

ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

Sd/-

(ಮುಜಫರ್)

ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ

ತರೀಕೆರೆ .